# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 992/2023 ಪಿ.ಡಬ್ಲ್ಯೂಃ 1

ಸಿಡಬ್ಲೂಃ 1

ಸಾಕ್ಷಿದಾರರ ಹೆಸರು : ಮಾದು

ತಂದೆಯ ಹೆಸರು : ಮುತ್ತು ನಾಯ್ಕು

ವಯಸ್ಸು : 58 ವರ್ಷ

ಉದ್ಯೋಗ : ಅಬಕಾರಿ ಉಪ ನಿರೀಕ್ಷಕರು , ಕಾರವಾರ ವಲಯ

ವಾಸ್ತವ್ಯ : ಕಾರವಾರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 03-02-2024

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

ನಾನು ದಿನಾಂಕಃ 04.02.2022 ರಿಂದ ಇಲ್ಲಿಯವರೆಗೆ ಉಪನಿರೀಕ್ಷಕನಾಗಿ ಕಾರವಾರ ವಲಯದಲ್ಲಿ ಕೆಲಸ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 21.03.2023 ನಾನು ಚಾಸಾ.2 ಮತ್ತು 3 ರವರೊಂದಿಗೆ ಕಚೇರಿಯಿಂದ ಹೊರಟು ಬೆಳಿಗ್ಗೆ 9.00 ಗಂಟೆಗೆ ಭೀಮಕೋಲ ಡ್ಯಾಮ ಹತ್ತಿರ ಅರಣ್ಯ ಪ್ರದೇಶದಲ್ಲಿ ಗಸ್ತುಕರ್ತವ್ಯದಲ್ಲಿದ್ದಾಗ ನನಗೆ ಬಾತ್ಮಿದಾರರೊಬ್ಬರು ಕರೆ ಮಾಡಿ ಮನೋಜ ಸುರೇಶ ಕೋಳಂಬಕರ ಎನ್ನುವ ವ್ಯಕ್ತಿ ಅಕ್ರಮವಾಗಿ ಗೋವಾ ಮದ್ಯವನ್ನು ಅಕ್ರಮವಾಗಿ ದಾಸ್ತಾನು ಮಾಡಿ ಹೋಟೇಗಾಳಿ ಗ್ರಾಮದ ಭೀಮಕೋಲ ಡ್ಯಾಮ ಹತ್ತಿರ ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿತು. ಸದರಿ ಸಮಯಕ್ಕೆ ಒಬ್ಬ ವ್ಯಕ್ತಿ ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದ್ದು , ನಾವು ಅವನನ್ನು ಬೆನ್ನಟ್ಟಿ ಹಿಡಿದೆವು. ಅವನ ಹೆಸರನ್ನು ವಿಚಾರಿಸಲಾಗಿ ತನ್ನ ಹೆಸರು ಮನೋಜ ಸುರೇಶ ಕೋಳಂಬಕರ ಎಂದು ತಿಳಿಸಿದನು. ಸದರಿ ವ್ಯಕ್ತಿಯನ್ನು ಹಿಡಿದುಕೊಂಡು ನಾವು ಸ್ವಲ್ಪ ಮುಂದೆ ಹೋದಾಗ ಅಲ್ಲಿ 4 ಚೀಲಗಳು ಇರುವುದು ಕಂಡು ಬಂದಿತು. ಸದರಿ ಚೀಲಗಳು ಯಾರಿಗೆ ಸಂಬಂಧಿಸಿರುತ್ತವೆ ಎಂದು ಕೇಳಲಾಗಿ ಮನೋಜ ಸುರೇಶ ಕೋಳಂಬರಕರ ಆ ಚೀಲಗಳು ತನಗೆ ಸಂಬಂಧಿಸಿದ್ದು ಎಂದು ಹೇಳಿದನು. ಸದರಿ ಚೀಲದಲ್ಲಿ ಗೋವಾ ರಾಜ್ಯದ ಸರಾಯಿ ಇರುವುದು ಕಂಡು ಬಂದಿತು. ಅವನ ಬಳಿ ಯಾವುದೇ ಪಾಸ್ / ಪರ್ಮಿಟ ಕಂಡು ಬರಲಿಲ್ಲಾ. ಸದರಿ ಚೀಲಗಳನ್ನು ಪರಿಶೀಲಿಸುವ ಸಲುವಾಗಿ ಸುತ್ತಲಿನಲ್ಲಿ ಅರಣ್ಯ ಪ್ರದೇಶವಾಗಿದ್ದರಿಂದ ಜನರು ಯಾರೂ ಸಿಗಲಿಲ್ಲಾ. ಆದ ಕಾರಣ ಭೀಮಕೋಲ ಡ್ಯಾಮ ಹೊಟೆಗಾಳಿ ಗ್ರಾಮದ ಜನರಿಗೆ ಪಂಚರಾಗಿ ಸಹಕರಿಸಲು ಕೋರಿದಾಗ ಅವರು ಒಪ್ಪಲಿಲ್ಲಾ. ಸದರಿ ಗ್ರಾಮದಿಂದ

ನಾನು ಮರಳಿ ಬಂದು ನನ್ನ ಸಿಬ್ಬಂದಿಯವರಿಗೆ ಪಂಚರಾಗಿ ಸಹಕರಿಸಲು ನೋಟೀಸು ನೀಡಿದ್ದು , ಅವರು ಸ್ವೀಕರಿಸಿ ಪರಸ್ಪರ ಅಂಗಜಪ್ತಿ ಮಾಡಿಕೊಂಡರು. ನಂತರ ನ್ಯಾಯಾಲಯದಿಂದ ಸರ್ಚ ವಾರಂಟ ಪಡೆಯಲು ಸಮಯಾವಕಾಶ ಇಲ್ಲದಿರುವ ಕಾರಣ ಸ್ಥಳದಲ್ಲೇ ಕ.ಅ.ಕಾಯ್ದೆ ಕಲಂ 54ರ ಅಡಿಯಲ್ಲಿ ಶೋಧನಾ ಸಮ್ಮುಚಿತ ಪತ್ರವನ್ನು ತಯಾರಿಸಿದೆನು.

3. ನಂತರ ಪಂಚರ ಸಮಕ್ಷಮ ಚೀಲಗಳನ್ನು ಸವಿಸ್ತಾರವಾಗಿ ಪರಿಶೀಲಿಸಿ ನೋಡಲಾಗಿ , ಸದರಿ ಚೀಲಗಳು ಬಿಳಿ ಬಣ್ಣದ್ದಾಗಿದ್ದು , 1ನೇ ಚೀಲದಲ್ಲಿ 750 ಎಂ ಎಲ್ ನ ರಿಯಲ ವಿಸ್ಕಿ -36 ಬಾಟಲುಗಳು, 2ನೇ ಚೀಲದಲ್ಲಿ 750 ಎಂ ಎಲ್ ನ ಲೈಟಹಾರ್ಸ ವಿಸ್ಕಿ -36 ಬಾಟಲುಗಳು, 3ನೇ ಚೀಲದಲ್ಲಿ 750 ಎಂ ಎಲ್ ನ ಮೆಕಡವಲ್ಸ ನಂ.1 -24 ಬಾಟಲುಗಳು ಮತ್ತು 4ನೇ ಚೀಲದಲ್ಲಿ 180 ಎಂ ಎಲ್ ನ ಮೆಕಡವಲ್ಸ ನಂ.1 96 ಬಾಟಲುಗಳು ಇರುವುದು ಕಂಡು ಬಂದಿತು.

4. ನಂತರ ರಾಸಾಯನಿಕ ಪರೀಕ್ಷೆಗೋಸ್ಕರ ಪ್ರತಿಯೊಂದು ಚೀಲದಿಂದ 4 ರಂತೆ ಒಟ್ಟು 16 ಬಾಟಲುಗಳನ್ನು ತೆಗೆದು ಅವುಗಳ ಮೇಲೆ ಬಟ್ಟೆ ಸುತ್ತಿ, ದಾರ ಕಟ್ಟಿ ಸೀಲ್ ಮಾಡಿ ನಮ್ಮ ಸಹಿ ಇರುವ ಮಾದರಿ ಚೀಟಿ ಅಂಟಿಸಿ ಪಂಚನಾಮೆಯನ್ನು ಮಾಡಲಾಯಿತು. ಪಂಚನಾಮೆಯನ್ನು 9.30 ರಿಂದ 10.30 ರ ವರೆಗೆ ಮಾಡಿ ಮುಗಿಸಲಾಯಿತು. ನಂತರ ಎಲ್ಲಾ ದಾಖಲೆಗಳನ್ನು ಗಣಕೀಕೃತ ಮಾಡಿ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡೆನು. ನ್ಯಾಯಾಲಯದ ಮುಂದಿರುವ ಆರೋಪಿ ಮತ್ತು ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ.

5. ಈಗ ನ್ಯಾಯಾಲಯದ ಮುಂದಿರುವ ಸರ್ಚ ವಾರಂಟನ್ನು ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.1ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಪಂಚನಾಮೆಯನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು, ಅದನ್ನು ನಿಪಿ.2ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಮಾದರಿ ಸೀಲು ಪತ್ರವನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ದೂರನ್ನು ನೋಡುತ್ತಿದ್ದು , ಅದನ್ನು ಗುರುತಿಸುತ್ತೇನೆ. ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.4ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಪ್ರ ವ ವರದಿ ನೋಡುತ್ತಿದ್ದು , ಅದನ್ನು

ಗುರುತಿಸುತ್ತೇನೆ. ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿ ನನ್ನದೇ ಆಗಿದ್ದು , ಅದನ್ನು ನಿಪಿ.5 ಎ ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಪಂಚರಿಗೆ ನೀಡಿದ ನೋಟೀಸನ್ನು ನೋಡುತ್ತಿದ್ದು , ಅವುಗಳನ್ನು ಗುರುತಿಸುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಪಿ.6 ಮತ್ತು ನಿಪಿ.7 ಎಂದು ಗುರುತಿಸಲಾಯಿತು. ಅವುಗಳಲ್ಲಿರುವ ಸಹಿ ನನ್ನದೇ ಆಗಿದ್ದು , ನನ್ನ ಸಹಿಯನ್ನು ಅನುಕ್ರಮವಾಗಿ ನಿಪಿ.6 ಎ ಮತ್ತು ನಿಪಿ.7 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು ಮಾ ಗಳನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಅನುಕ್ರಮವಾಗಿ ಮು ಮಾ 1 ರಿಂದ ಮು ಮಾ 16 ಎಂದು ಗುರುತಿಸಲಾಯಿತು. ಅವುಗಳ ಮೇಲಿರುವ ನನ್ನ ಸಹಿಯನ್ನು ಮು ಮಾ 1 ಎ ರಿಂದ ಮು ಮಾ 16 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಪಿ ಜಿ ಆರೋಪಿ ಪರ ವಕೀಲರಿಂದ**

**6.** ನಾವು 9.00 ಗಂಟೆಗೆ ಕರ್ತವ್ಯಕ್ಕೆ ಹೋಗಿದ್ದೆವು. ನಾವು ಕಚೇರಿಯಿಂದ ಹೊರಡುವ ಕಾಲಕ್ಕೆ ಭೀಮಕೋಲ ಪ್ರದೇಶಕ್ಕೆ ಹೋಗುತ್ತಿರುವುದು ನಮಗೆ ತಿಳಿದಿತ್ತು ಎಂದರೆ ಸರಿ. ಭೀಮಕೋಲ ಪ್ರದೇಶ ಜಂಗಲ ಪ್ರದೇಶ ಎಂದು ನಮಗೆ ತಿಳಿದಿತ್ತು ಎಂದರೆ ಸರಿ. ಮೊದಲೇ ಪಂಚರಿಗೆ ಕರೆದುಕೊಂಡು ಹೋಗಲು ತೊಂದರೆ ಇತ್ತಾ ಎಂದರೆ ಇಲ್ಲಾ ಎಂದು ನುಡಿಯುತ್ತಾರೆ. ಸರಾಯಿ ಬಾಟಲುಗಳು ತುಂಬಿದ್ದ ಚೀಲಗಳು ಸಿಕ್ಕ ಜಾಗದ ಸರ್ವೇ ನಂಬರ ಹೇಳಲು ಬರುವುದಿಲ್ಲಾ. ಸರ್ಚ ವಾರಂಟನ್ನು ಪೂರ್ತಿಯಾಗಿ ನಾನೇ ಕೈಯಲ್ಲಿ ಬರೆದಿರುತ್ತೇನೆ. ಪಂಚನಾಮೆಯಲ್ಲಿ ಯಾವ ಗುನ್ನೆಗೆ ಸಂಬಂಧಿಸಿದಂತೆ ನಾವು ಪ್ರಕರಣ ದಾಖಲಿಸಿದ್ದೇವೆಂದು ನಮೂದು ಇರುವುದಿಲ್ಲಾ ಎಂದರೆ ಸರಿ. ಪಂಚನಾಮೆಗೆ ನಾನು ಮತ್ತು ಪಂಚರು ಯಾವ ತಾರೀಖಿನಂದು ಸಹಿ ಮಾಡಿರುತ್ತೇವೆ ಎಂದು ನಮೂದಿಸಿರುವುದಿಲ್ಲಾ ಎಂದರೆ ಸರಿ. ಸರಾಯಿ ಬಾಟಲುಗಳ ತಯಾರಾದ ದಿನಾಂಕ ನನಗೆ ಹೇಳಲು ಬರುವುದಿಲ್ಲಾ ಎಂದರೆ ಸರಿ. 4 ಚೀಲಗಳು ಈಗ ನ್ಯಾಯಾಲಯದ ಮುಂದೆ ಇಲ್ಲಾ ಎಂದರೆ ಸರಿ. ಆರೋಪಿಗೂ ಮತ್ತು ಘಟನಾ ಸ್ಥಳಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿ. ಪಂಚರು ನನ್ನ ಕೆಳಗಿನ ದರ್ಜೆಯ ನೌಕರರು ಎಂದರೆ ಸರಿ. ಸದರಿ ಪಂಚರನ್ನು ತೆಗೆದುಕೊಂಡು 2023 ನೇ ಸಾಲಿನಲ್ಲಿ ಒಟ್ಟು 8 ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಇರಬಹುದು.

7. ನಾವು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲಾ ಮತ್ತು ಜಂಗಲ್ ನಲ್ಲಿ ಆರೋಪಿ ಸಿಕ್ಕಿರುವುದಿಲ್ಲಾ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಯಾವುದೇ ಮು ಮಾ ಗಳನ್ನು ವಶಪಡಿಸಿಕೊಂಡಿಲ್ಲಾ ಎಂದರೆ ಸರಿಯಲ್ಲ. ಮು ಮಾ ಗಳಿಗೂ, ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ದೂರು ದಾಖಲಿಸಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ

ಪಂಚನಾಮೆ ಮಾಡಿಲ್ಲಾ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿದ್ದ ವಾರಸುದಾರರಿಲ್ಲದ ಮು ಮಾ ಗಳನ್ನು ಬಳಸಿಕೊಂಡು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**